# ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್ ಅಧಿನಿಯಮ, 1999

**5.5.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 37ನೇ ಸಂಪುಟದ 1ನೇ ಸಂಚಿಕೆಯಲ್ಲಿ 189 ರಿಂದ 201 ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**


## ಅಧ್ಯಾಯ - I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

## ಅಧ್ಯಾಯ - II

### ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟಿನ ರಚನೆ

3. ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆ, ಇತ್ಯಾದಿಗಳಿರುವ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟಿನ ರಚನೆ
4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ, ಮಂಡಲಿಯ ಸಭೆ, ಮುಂತಾದವು
5. ಅಧ್ಯಕ್ಷನ ಮತ್ತು ಸದಸ್ಯರ ರಾಜೀನಾಮೆ
6. ಅನರ್ಹತೆಗಳು
7. ಸದಸ್ಯರು ಪದವನ್ನು ತೆರವು ಮಾಡುವುದು
8. ಟ್ರಸ್ಟಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿ
9. ಮಂಡಲಿಯಲ್ಲಿನ ಖಾಲಿ ಸ್ಥಾನಗಳು ಕಾರ್ಯಗಳನ್ನು, ಇತ್ಯಾದಿಗಳನ್ನು ಅಸಿಂಧುಗೊಳಿಸದಿರುವುದು

## ಅಧ್ಯಾಯ - III

### ಟ್ರಸ್ಟಿನ ಉದ್ದೇಶಗಳು

10. ಟ್ರಸ್ಟಿನ ಉದ್ದೇಶಗಳು

## ಅಧ್ಯಾಯ - IV

### ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು

11. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು

## ಅಧ್ಯಾಯ -V

### ನೋಂದಣಿ ಕಾರ್ಯವಿಧಾನ

12. ನೋಂದಣಿ ಕಾರ್ಯವಿಧಾನ

## ಅಧ್ಯಾಯ -VI

### ಸ್ಥಳೀಯ ಮಟ್ಟದ ಸಮಿತಿಗಳು

13. ಸ್ಥಳೀಯ ಮಟ್ಟದ ಸಮಿತಿಗಳ ರಚನೆ

14. ಪಾಲಕನಾಗಿರಲು ನೇಮಕಾತಿ

15. ಪಾಲಕನ ಕರ್ತವ್ಯಗಳು

16. ಪಾಲಕನು ತಪಶೀಲು ಪಟ್ಟಿ ಮತ್ತು ವಾರ್ಷಿಕ ಲೆಕ್ಕ ಪತ್ರಗಳನ್ನು ಒದಗಿಸುವುದು

17. ಪಾಲಕನನ್ನು ತೆಗೆದುಹಾಕುವುದು

## ಅಧ್ಯಾಯ - VII

### ಉತ್ತರದಾಯಿತ್ವ ಮತ್ತು ಮೇಲ್ವಿಚಾರಣೆ

18. ಉತ್ತರದಾಯಿತ್ವ

19. ಮೇಲ್ವಿಚಾರಣೆ

20. ವಾರ್ಷಿಕ ಸಾಮಾನ್ಯ ಸಭೆ

## ಅಧ್ಯಾಯ - VIII

### ಹಣಕಾಸು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ

21. ಕೇಂದ್ರ ಸರ್ಕಾರದಿಂದ ಅನುದಾನಗಳು

22. ನಿಧಿ

23. ಆಯವ್ಯಯ ಪತ್ರ

24. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

25. ವಾರ್ಷಿಕ ವರದಿ

26. ಆದೇಶ, ಇತ್ಯಾದಿಗಳ ಅಧಿಪ್ರಮಾಣನ

27. ವಿವರ ಪಟ್ಟಿಕೆಗಳು ಮತ್ತು ಮಾಹಿತಿ

## ಅಧ್ಯಾಯ - IX

### ಸಂಕೀರ್ಣ

28. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ

29. ಮಂಡಲಿಯನ್ನು ಅಧಿಕ್ರಮಣಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ

30. ಆದಾಯ ತೆರಿಗೆಯಿಂದ ವಿನಾಯಿತಿ

31. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ

32. ಟ್ರಸ್ಟಿನ ಅಧ್ಯಕ್ಷ, ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು

33. ಪ್ರತ್ಯಾಯೋಜನೆ

34. ನಿಯಮ ರಚನಾಧಿಕಾರ

35. ವಿನಿಯಮ ರಚನಾಧಿಕಾರ

36. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು

# ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್ ಅಧಿನಿಯಮ, 1999

(1999ರ ಅಧಿನಿಯಮ ಸಂಖ್ಯೆ 44)

[30ನೇ ಡಿಸೆಂಬರ್, 1999]

ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ಟ್ರಸ್ಟಿನ ರಚನೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಮತ್ತು ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮನೋವಿಕಾರ" ಎಂದರೆ ಒಬ್ಬ ವ್ಯಕ್ತಿಯ ಸಂಪರ್ಕದ ಮತ್ತು ಸಾಮಾಜಿಕ ಸಾಮರ್ಥ್ಯಗಳನ್ನು ಮುಖ್ಯವಾಗಿ ಬಾಧಿಸುವ ಮತ್ತು ಆಡಿದ್ದನ್ನೇ ಆಡುವ ಮತ್ತು ಮಾಡಿದ್ದನ್ನೇ ಮಾಡುವ ವರ್ತನೆಯಿಂದ ಗುರುತಿಸಬಹುದಾದ ಕೌಶಲ್ಯ ಬೆಳವಣಿಗೆಯ ಅಸಮ ಸ್ಥಿತಿ;

(ಬಿ) "ಮಂಡಲಿ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ಟ್ರಸ್ಟಿಗಳ ಮಂಡಲಿ;

(ಸಿ) "ಮಿದುಳಿನ ಪಾರ್ಶ್ವವಾಯು" ಎಂದರೆ ಬೆಳವಣಿಗೆಗೆ ಸಂಬಂಧಿಸಿದಂತೆ ಜನನಪೂರ್ವ, ಜನನೋತ್ತರ ಅಥವಾ ಶೈಶವಾವಸ್ಥೆಯ ಅವಧಿಯಲ್ಲಿ ಮೆದುಳಿನ ಘಾತ ಅಥವಾ ಹಾನಿಗಳ ಪರಿಣಾಮವಾಗಿ ಉಂಟಾದ ಬಾಲಕನ ನಿಯಂತ್ರಣದ ಅಸಹಜ ಭಂಗಿಯ ದೃಶ್ಯಗಳನ್ನು ಹೊಂದಿರುವ ಒಬ್ಬ ವ್ಯಕ್ತಿಯ ಬೆಳವಣಿಗೆಯ ಹಿನ್ನಡೆ ಸ್ಥಿತಿಗಳ ಒಂದು ಗುಂಪು.

(ಡಿ) "ಅಧ್ಯಕ್ಷ" ಎಂದರೆ 3ನೇ ಪ್ರಕರಣದ (4)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನೇಮಕಗೊಂಡ ಮಂಡಲಿಯ ಅಧ್ಯಕ್ಷ;

(ಇ) "ಮುಖ್ಯ ಕಾರ್ಯನಿರ್ವಹಣಾಧಿಕಾರಿ" ಎಂದರೆ 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಮುಖ್ಯ ಕಾರ್ಯನಿರ್ವಹಣಾಧಿಕಾರಿ;

(ಎಫ್) "ಸದಸ್ಯ" ಎಂದರೆ ಮಂಡಲಿಯ ಒಬ್ಬ ಸದಸ್ಯ ಮತ್ತು ಅದರಲ್ಲಿ ಅಧ್ಯಕ್ಷನೂ ಒಳಗೊಳ್ಳುತ್ತಾನೆ;

(ಜಿ) "ಬುದ್ಧಿಮಾಂದ್ಯತೆ" ಎಂದರೆ ಬುದ್ಧಿಶಕ್ತಿಯು ವಿಶೇಷವಾಗಿ ಸಾಧಾರಣ ಮಟ್ಟಕ್ಕಿಂತಲೂ ಕಡಿಮೆಯಾಗಿರುವ ಲಕ್ಷಣವುಳ್ಳ ಒಬ್ಬ ವ್ಯಕ್ತಿಯ ಮಾನಸಿಕ ಬೆಳವಣಿಗೆ ಕುಂಠಿತವಾದ ಅಥವಾ ಅಪೂರ್ಣವಾದ ಒಂದು ಸ್ಥಿತಿ;

(ಹೆಚ್) "ಬಹುವಿಧ ವಿಕಲತೆ" ಎಂದರೆ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 (1996ರ ಅಧಿನಿಯಮ ಸಂಖ್ಯೆ 1)ರ 2ನೇ ಪ್ರಕರಣದ (ಐ)ನೇ ಖಂಡದಲ್ಲಿ ಪರಿಭಾಷಿಸಿದಂತೆ ಎರಡು ಅಥವಾ ಹೆಚ್ಚಿನ ವಿಕಲತೆಗಳ ಒಂದು ಸಂಯೋಜನೆ;

(ಐ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಲಾದ ಒಂದು ಅಧಿಸೂಚನೆ;

(ಜೆ) "ವಿಕಲತೆಯುಳ್ಳ ವ್ಯಕ್ತಿ" ಎಂದರೆ ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆಗೆ ಸಂಬಂಧಿಸಿದ ಯಾವುದೇ ಸ್ಥಿತಿಯಿಂದ ಅಥವಾ ಅಂಥ ಸ್ಥಿತಿಗಳ ಪೈಕಿ ಎರಡು ಅಥವಾ ಹೆಚ್ಚಿನ ಸ್ಥಿತಿಗಳ ಸಂಯೋಜನೆಯಿಂದ ಬಳಲುತ್ತಿರುವ ವ್ಯಕ್ತಿ ಮತ್ತು ಅದರಲ್ಲಿ ತೀವ್ರ ಬಹುವಿಧ ವಿಕಲತೆಗಳಿಂದ ಬಳಲುತ್ತಿರುವ ವ್ಯಕ್ತಿಯೂ ಒಳಗೊಳ್ಳುತ್ತಾನೆ;

(ಕೆ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಲ್) "ವೃತ್ತಿ ಪರಿಣಿತ" ಎಂದರೆ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣಕ್ಕೆ ಪ್ರೋತ್ಸಾಹ ನೀಡುವ ಕ್ಷೇತ್ರದಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ಒಬ್ಬ ವ್ಯಕ್ತಿ;

(ಎಂ) "ನೋಂದಾಯಿತ ಸಂಸ್ಥೆ" ಎಂದರೆ 12ನೇ ಪ್ರಕರಣದ ಮೇರೆಗೆ ನೋಂದಾಯಿತವಾಗಿರುವ, ವಿಕಲತೆಯುಳ್ಳ ವ್ಯಕ್ತಿಗಳ ಸಂಘ ಅಥವಾ ಸಂದರ್ಭಾನುಸಾರ ವಿಕಲತೆಯುಳ್ಳ ವ್ಯಕ್ತಿಗಳ ಮಾತಾ ಪಿತೃಗಳ ಸಂಘ ಅಥವಾ ಸ್ವಯಂ ಸೇವಾ ಸಂಸ್ಥೆ;

(ಎನ್) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಮಂಡಲಿ ರಚಿಸಿರುವ ವಿನಿಯಮಗಳು;

(ಓ) "ತೀವ್ರ ವಿಕಲತೆ" ಎಂದರೆ ಬಹುವಿಧ ವಿಕಲತೆಗಳ ಪೈಕಿ ಒಂದು ಅಥವಾ ಅದಕ್ಕೂ ಹೆಚ್ಚು ವಿಕಲತೆಯ ಎಂಬತ್ತರಷ್ಟು ಅಥವಾ ಅದಕ್ಕೂ ಹೆಚ್ಚು ವಿಕಲತೆ;

(ಪಿ) "ಟ್ರಸ್ಟ್" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ, ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್.

## ಅಧ್ಯಾಯ - II

## ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟಿನ ರಚನೆ

**3. ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆ, ಇತ್ಯಾದಿಗಳಿರುವ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟಿನ ರಚನೆ.-** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್ ಎಂಬ ಹೆಸರಿನ ಒಂದು ನಿಕಾಯವು ರಚಿತವಾಗತಕ್ಕದ್ದು, ಅದು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರುವ ಈ ಮೇಲೆ ಹೇಳಿದ ಹೆಸರನ್ನುಳ್ಳ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಲ್ಲಿ ಅದು ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(2) ಟ್ರಸ್ಟಿನ ವ್ಯವಹಾರಗಳ ಮತ್ತು ಕಾರ್ಯಕಲಾಪಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ಮಂಡಳಿಯಲ್ಲಿ ನಿಹಿತವಾಗಿರತಕ್ಕದ್ದು, ಆ ಮಂಡಳಿಯು ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಮಾಡಬಹುದಾದಂಥ ಎಲ್ಲಾ ಕೃತ್ಯ ಹಾಗೂ ಕಾರ್ಯಗಳನ್ನು ಮಾಡಬಹುದು.

(3) ಟ್ರಸ್ಟಿನ ಮುಖ್ಯ ಕಛೇರಿಯು ದೆಹಲಿಯಲ್ಲಿರತಕ್ಕದ್ದು ಮತ್ತು ಮಂಡಳಿಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಭಾರತದ ಇತರ ಸ್ಥಳಗಳಲ್ಲಿ ಕಛೇರಿಗಳನ್ನು ಸ್ಥಾಪಿಸಬಹುದು.

(4) ಮಂಡಲಿಯು, ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,-

(ಎ) ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಮತ್ತು ಬಹುವಿಧ ವಿಕಲತೆಯ ಈ ಕ್ಷೇತ್ರಗಳಲ್ಲಿ ತಜ್ಞತೆ ಮತ್ತು ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ಅಧ್ಯಕ್ಷ;

(ಬಿ) ನಿಯಮಿಸಬಹುದಾದಂಥ ಕಾರ್ಯವಿಧಾನಕ್ಕನುಸಾರವಾಗಿ ಸದಸ್ಯನಾಗಿ ನೋಂದಾಯಿತ ಸಂಸ್ಥೆಗಳ ಪೈಕಿಯಿಂದ ನೇಮಕಗೊಳ್ಳಬೇಕಾದ ಒಂಬತ್ತು ಜನರು, ಈ ಪೈಕಿ ಸ್ವಯಂಸೇವಾ ಸಂಸ್ಥೆಗಳಿಂದ ಮನೋ ವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಮತ್ತು ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಮಾತಾಪಿತೃಗಳ ಸಂಘದಿಂದ ಮತ್ತು ವಿಕಲತೆಯುಳ್ಳ ವ್ಯಕ್ತಿಗಳ ಸಂಘದಿಂದ - ಪ್ರತಿಯೊಂದರಿಂದಲೂ ಮೂವರು ಸದಸ್ಯರು ಇರತಕ್ಕದ್ದು:

ಪರಂತು, ಈ ಖಂಡದ ಮೇರೆಗಿನ ಪ್ರಾರಂಭಿಕ ನೇಮಕಾತಿಯನ್ನು ಕೇಂದ್ರ ಸರ್ಕಾರವು ನಾಮನಿರ್ದೇಶನದ ಮೂಲಕ ಮಾಡತಕ್ಕದ್ದು;

(ಸಿ) ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಹಣಕಾಸು, ಕಾರ್ಮಿಕ, ಶಿಕ್ಷಣ, ನಗರ ಸಂಬಂಧಿ ವ್ಯವಹಾರಗಳು ಮತ್ತು ಉದ್ಯೋಗ ಹಾಗೂ ಗ್ರಾಮೀಣ ಉದ್ಯೋಗ ಮತ್ತು ಬಡತನ ನಿವಾರಣೆ - ಈ ಮಂತ್ರಾಲಯಗಳನ್ನು ಅಥವಾ ಇಲಾಖೆಗಳನ್ನು ಪ್ರತಿನಿಧಿಸಲು ಸರ್ಕಾರದ ಪದನಿಮಿತ್ತ ಸದಸ್ಯರಾಗಿ ಭಾರತ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಆ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ದರ್ಜೆಯ ಎಂಟು ಜನ ವ್ಯಕ್ತಿಗಳು;

(ಡಿ) ಲೋಕೋಪಕಾರಿ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳನ್ನು ಪ್ರತಿನಿಧಿಸಲು ಸದಸ್ಯರಾಗಿ ಮಂಡಳಿಯು ನಾಮನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು;

(ಇ) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಯವನಾಗಿರತಕ್ಕ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(5) ಮಂಡಲಿಯು ಟ್ರಸ್ಟಿನ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅದು ಯಾವ ವ್ಯಕ್ತಿಯ ಸಹಾಯ ಅಥವಾ ಸಲಹೆಯನ್ನು ಬಯಸುವುದೋ ಆ ವ್ಯಕ್ತಿಯನ್ನು ವಿನಿಯಮಗಳ ಮೂಲಕ ಹಾಗೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಅದು ತನ್ನ ಜೊತೆ ಸೇರಿಸಿಕೊಳ್ಳಬಹುದು:

ಪರಂತು, ಅಂಥ ವ್ಯಕ್ತಿಯು ಆ ಉದ್ದೇಶಕ್ಕೆ ಸುಸಂಗತವಾದ ಚರ್ಚೆಯಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು ಆದರೆ ಮಂಡಲಿಯ ಸಭೆಯಲ್ಲಿ ಮತ ಚಲಾಯಿಸಲು ಹಕ್ಕು ಹೊಂದಿರತಕ್ಕದ್ದಲ್ಲ ಮತ್ತು ಇತರ ಯಾವುದೇ ಉದ್ದೇಶಕ್ಕಾಗಿ ಮಂಡಳಿಯ ಸದಸ್ಯನಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಹಾಗೆ ಸೇರಿಸಿಕೊಂಡ ವ್ಯಕ್ತಿಗಳ ಗರಿಷ್ಠ ಸಂಖ್ಯೆಯು ಎಂಟಕ್ಕೆ ಮೀರತಕ್ಕದ್ದಲ್ಲ ಮತ್ತು ಹಾಗೆ ಸಂಬಂಧಪಿರಿಸಿಕೊಂಡ ವ್ಯಕ್ತಿಯು ಸಾಧ್ಯವಾದಷ್ಟು ಮಟ್ಟಿಗೆ ನೋಂದಾಯಿತ ಸಂಸ್ಥೆಗೆ ಸೇರಿದವನಾಗಿರತಕ್ಕದ್ದು ಅಥವಾ ವೃತ್ತಿ ಪರಿಣಿತರ ಪೈಕಿಗೆ ಸೇರಿದವನಾಗಿರತಕ್ಕದ್ದು.

**4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ, ಮಂಡಲಿಯ ಸಭೆ, ಮುಂತಾದವು.-** (1) ಅಧ್ಯಕ್ಷ ಅಥವಾ ಸದಸ್ಯನು ತನ್ನ ನೇಮಕಾತಿಯ ದಿನಾಂಕದಿಂದ ಮೂರು ವರ್ಷಗಳ ಅವಧಿಗಾಗಿ ಅಥವಾ ತನ್ನ ಉತ್ತರಾಧಿಕಾರಿಯು ಕ್ರಮಬದ್ಧವಾಗಿ ನೇಮಕವಾಗುವವರೆಗೆ, ಇವುಗಳಲ್ಲಿ ಯಾವುದು ದೀರ್ಘವೋ ಅಲ್ಲಿಯವರೆಗೆ ಪದದಲ್ಲಿರತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ಅವನು ಅರವತ್ತೈದು ವರ್ಷಗಳ ವಯಸ್ಸಿನವನಾದ ತರುವಾಯ ಅಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದಲ್ಲ.

(2) ಅಧ್ಯಕ್ಷ ಮತ್ತು ಇತರ ಸದಸ್ಯರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಮಂಡಳಿಯಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು 3ನೇ ಪ್ರಕರಣದ ಉಪಬಂಧಗಳಿಗನುಗುಣವಾಗಿ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು ಯಾರ ಸ್ಥಾನದಲ್ಲಿ ನೇಮಕಗೊಂಡಿರುವನೋ ಆ ಸದಸ್ಯನ ಪದಧಾರಣದ ಉಳಿದ ಅವಧಿಯವರೆಗೆ ಮಾತ್ರ ಪದಧಾರಣ ಮಾಡಿರತಕ್ಕದ್ದು.

(4) ಯಾರೇ ವ್ಯಕ್ತಿಯನ್ನು ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ನೇಮಕ ಮಾಡುವ ಮೊದಲು ಕೇಂದ್ರ ಸರ್ಕಾರವು, ಆ ವ್ಯಕ್ತಿಯು, ಸದಸ್ಯನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಂಭವವಿರುವಂಥ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಅಥವಾ ಇತರ ಹಿತಾಸಕ್ತಿಯನ್ನು ಹೊಂದಿಲ್ಲ ಅಥವಾ ಹೊಂದಿರುವುದಿಲ್ಲವೆಂಬ ಬಗ್ಗೆ ಮನವರಿಕೆ ಮಾಡಿಕೊಳ್ಳತಕ್ಕದ್ದು.

(5) ಮಂಡಲಿಯ ಯಾರೇ ಸದಸ್ಯನು ಅಂಥ ಸದಸ್ಯನಾಗಿ ಪದಧಾರಣ ಮಾಡಿರುವ ಅವಧಿಯಲ್ಲಿ ಟ್ರಸ್ಟಿನಿಂದ ಯಾವುದೇ ಪ್ರಯೋಜನವನ್ನು ಪಡೆಯತಕ್ಕದ್ದಲ್ಲ.

(6) ಮಂಡಲಿಯು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು ಮತ್ತು ಆ ಸಭೆಯಲ್ಲಿ ವ್ಯವಹಾರ ನಡೆಸುವುದರ ಬಗ್ಗೆ ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಪಾಲಿಸತಕ್ಕದ್ದು.

(7) ಅಧ್ಯಕ್ಷನು, ಯಾವುದೇ ಕಾರಣಕ್ಕಾಗಿ ಮಂಡಳಿಯ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರ ಪೈಕಿ ಆಯ್ಕೆ ಮಾಡಿದ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(8) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವಂಥ ಎಲ್ಲ ಪ್ರಶ್ನೆಗಳನ್ನು, ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದಿಂದ ನಿರ್ಧರಿಸತಕ್ಕದ್ದು ಮತ್ತು ಮತಗಳು ಸಮನಾಗಿ ಬಂದಿರುವ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿದ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಚಲಾಯಿಸತಕ್ಕದ್ದು.

**5. ಅಧ್ಯಕ್ಷನ ಮತ್ತು ಸದಸ್ಯರ ರಾಜೀನಾಮೆ.**- (1) ಅಧ್ಯಕ್ಷನು ತಾನು ಸಹಿ ಹಾಕಿದ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು:

ಪರಂತು, ಕೇಂದ್ರ ಸರ್ಕಾರವು ಉತ್ತರಾಧಿಕಾರಿಯನ್ನು ನೇಮಕ ಮಾಡುವವರೆಗೆ ಅಧ್ಯಕ್ಷನು ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

(2) ಸದಸ್ಯನು ತಾನು ಸಹಿ ಹಾಕಿ ಬರೆದ ಪತ್ರವನ್ನು ಅಧ್ಯಕ್ಷನಿಗೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

**6. ಅನರ್ಹತೆಗಳು.**- ಯಾರೇ ವ್ಯಕ್ತಿಯು, ಅವನು,-

(ಎ) ಅಸ್ವಸ್ಥಚಿತ್ತನಾಗಿದ್ದರೆ ಅಥವಾ ಅಸ್ವಸ್ಥಚಿತ್ತನಾದರೆ ಅಥವಾ ಹಾಗೆಂದು ಸಕ್ಷಮ ನ್ಯಾಯಾಲಯವು ಘೋಷಿಸಿದರೆ; ಅಥವಾ

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ನಿರ್ಣೀತನಾದರೆ;

(ಸಿ) ದಿವಾಳಿಯೆಂದು ನ್ಯಾಯ ನಿರ್ಣೀತನಾದರೆ ಅಥವಾ ಯಾವುದೇ ಸಮಯದಲ್ಲಿ ನ್ಯಾಯನಿರ್ಣೀತನಾಗಿದ್ದರೆ

- ಸದಸ್ಯನಾಗತಕ್ಕದ್ದಲ್ಲ.

**7. ಸದಸ್ಯರು ಪದವನ್ನು ತೆರವು ಮಾಡುವುದು.**- ಒಬ್ಬ ಸದಸ್ಯನು,-

(ಎ) 6ನೇ ಪ್ರಕರಣದಲ್ಲಿ ನಮೂದಿಸಲಾದ ಯಾವುವೇ ಅನರ್ಹತೆಗಳಿಗೆ ಒಳಪಟ್ಟರೆ; ಅಥವಾ

(ಬಿ) ಮಂಡಳಿಯಿಂದ ಗೈರುಹಾಜರಿ ರಜೆಯನ್ನು ಪಡೆಯದೆ ಮಂಡಳಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಸಿ) 5ನೇ ಪ್ರಕರಣದ ಮೇರೆಗೆ ತನ್ನ ರಾಜೀನಾಮೆಯನ್ನು ಸಲ್ಲಿಸಿದ್ದರೆ

– ಆ ತರುವಾಯ ಅವನ ಸ್ಥಾನವು ತೆರವಾಗತಕ್ಕದ್ದು.

**8. ಟ್ರಸ್ಟಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿ.**– (1) ಕೇಂದ್ರ ಸರ್ಕಾರವು, ಮಂಡಲಿಯ ನಿರ್ದೇಶನದ ಮೇರೆಗೆ ನಿಯಮಿಸಬಹುದಾದಂತೆ ಅಥವಾ ಅಧ್ಯಕ್ಷನು ಪ್ರತ್ಯಾಯೋಜಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಿಸತಕ್ಕದ್ದು.

(2) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಟ್ರಸ್ಟಿನ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅದು ಅಗತ್ಯವೆಂದು ಪರ್ಯಾಲೋಚಿಸುವಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡತಕ್ಕದ್ದು.

(3) ಟ್ರಸ್ಟಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ, ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬಹುದಾದ ವೇತನ ಮತ್ತು ಭತ್ಯೆಗಳು, ಮತ್ತು ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು.

**9. ಮಂಡಲಿಯಲ್ಲಿನ ಖಾಲಿ ಸ್ಥಾನಗಳು, ಕಾರ್ಯಗಳನ್ನು, ಇತ್ಯಾದಿಗಳನ್ನು ಅಸಿಂಧುಗೊಳಿಸದಿರುವುದು.**– ಮಂಡಲಿಯಲ್ಲಿ ಯಾವುದೇ ಖಾಲಿಸ್ಥಾನವಿರುವ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿರುವ ಕಾರಣ ಮಾತ್ರದಿಂದಲೇ ಮಂಡಲಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ.

## ಅಧ್ಯಾಯ – III

## ಟ್ರಸ್ಟಿನ ಉದ್ದೇಶಗಳು

**10. ಟ್ರಸ್ಟಿನ ಉದ್ದೇಶಗಳು.**– ಈ ಕೆಳಕಂಡವುಗಳು ಟ್ರಸ್ಟಿನ ಉದ್ದೇಶಗಳಾಗಿರತಕ್ಕದ್ದು,–

(ಎ) ವಿಕಲತೆಯುಳ್ಳ ವ್ಯಕ್ತಿಗಳು ಅವರು ಸೇರಿರುವ ಸಮುದಾಯದೊಳಗೆ ಮತ್ತು ಅದಕ್ಕೆ ಅತ್ಯಂತ ನಿಕಟವಾಗಿ ಸಾಧ್ಯವಾದಷ್ಟು ಸ್ವತಂತ್ರವಾಗಿ ಹಾಗೂ ಪರಿಪೂರ್ಣವಾಗಿ ಬದುಕುವಂತೆ ಅವರನ್ನು ಸಮರ್ಥಗೊಳಿಸುವುದು ಮತ್ತು ಸಶಕ್ತಗೊಳಿಸುವುದು;

(ಬಿ) ವಿಕಲತೆಯುಳ್ಳ ವ್ಯಕ್ತಿಗಳು ತಮ್ಮವೇ ಕುಟುಂಬಗಳಲ್ಲಿ ಬದುಕಲು ಬೆಂಬಲವನ್ನು ಒದಗಿಸುವ ಸಲುವಾಗಿ ಸೌಲಭ್ಯಗಳನ್ನು ಅಧಿಕಗೊಳಿಸುವುದು;

(ಸಿ) ವಿಕಲತೆಯುಳ್ಳ ವ್ಯಕ್ತಿಗಳ ಕುಟುಂಬದ ಸಂಕಟದ ಅವಧಿಯಲ್ಲಿ ಅಗತ್ಯ ಆಧಾರಿತ ಸೇವೆಗಳನ್ನು ಒದಗಿಸಲು ನೋಂದಾಯಿತ ಸಂಘಗಳಿಗೆ ಬೆಂಬಲ ನೀಡುವುದು;

(ಡಿ) ಕುಟುಂಬದ ಬೆಂಬಲವಿಲ್ಲದ ವಿಕಲತೆಯುಳ್ಳ ವ್ಯಕ್ತಿಗಳ ಸಮಸ್ಯೆಗಳನ್ನು ನಿಭಾಯಿಸುವುದು;

(ಇ) ವಿಕಲತೆಯುಳ್ಳ ವ್ಯಕ್ತಿಗಳ ತಂದೆ–ತಾಯಿ ಅಥವಾ ಪೋಷಕರ ಮರಣದ ಸಂದರ್ಭದಲ್ಲಿ ಅವರ ಆರೈಕೆ ಮತ್ತು ಸಂರಕ್ಷಣೆಗಾಗಿ ಕ್ರಮಗಳನ್ನು ಹೆಚ್ಚಿಸುವುದು;

(ಎಫ್) ಸಂರಕ್ಷಣೆ ಅಗತ್ಯವಿರುವ ವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಪೋಷಕರ ಮತ್ತು ಟ್ರಸ್ಟೀಗಳ ನೇಮಕದ ಬಗ್ಗೆ ಕಾರ್ಯವಿಧಾನವನ್ನು ರೂಪಿಸುವುದು;

(ಜಿ) ವಿಕಲತೆಯುಳ್ಳ ವ್ಯಕ್ತಿಗಳ ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆಯ ನೆರವೇರಿಕೆಯನ್ನು ಸುಗಮಗೊಳಿಸುವುದು;

(ಹೆಚ್) ಮೇಲೆ ಹೇಳಿದ ಉದ್ದೇಶಗಳಿಗೆ ಪ್ರಾಸಂಗಿಕವಾದ ಯಾವುದೇ ಇತರ ಕೃತ್ಯವನ್ನು ಮಾಡುವುದು.

## ಅಧ್ಯಾಯ - IV

## ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು

**11. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಮಂಡಲಿಯು,-

(ಎ) ಕೇಂದ್ರ ಸರ್ಕಾರದಿಂದ ಮೂಲ ನಿಧಿಗಾಗಿ ಒಂದು ಸಲದ ವಂತಿಗೆಯಾಗಿ ಒಂದು ನೂರು ಕೋಟಿ ರೂಪಾಯಿಗಳನ್ನು ಸ್ವೀಕರಿಸತಕ್ಕದ್ದು. ಅದರಿಂದ ಬರುವ ಆದಾಯವನ್ನು ವಿಕಲತೆಯುಳ್ಳ ವ್ಯಕ್ತಿಗಳಿಗೆ ಪರ್ಯಾಪ್ತ ಜೀವನ ಮಟ್ಟವನ್ನು ಒದಗಿಸುವ ಸಲುವಾಗಿ ಉಪಯೋಗಿಸತಕ್ಕದ್ದು;

(ಬಿ) ಸಾಮಾನ್ಯವಾಗಿ ವಿಕಲತೆಯುಳ್ಳ ವ್ಯಕ್ತಿಗಳ ಪ್ರಯೋಜನಕ್ಕಾಗಿ ಮತ್ತು ವಿಶೇಷವಾಗಿ ಟ್ರಸ್ಟಿನ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಯಾರೇ ವ್ಯಕ್ತಿಯಿಂದ ಚರಾಸ್ತಿಯನ್ನು ಮರಣ ಶಾಸನ ದಾನವಾಗಿ ಪಡೆಯತಕ್ಕದ್ದು:

ಪರಂತು, ಮರಣ ಶಾಸನ ದಾನದಲ್ಲಿ ಹೆಸರಿಸಲಾಗಿರುವ ಫಲಾನುಭವಿ ಯಾರಾದರೂ ಇದ್ದರೆ, ಅವರಿಗೆ ಪರ್ಯಾಪ್ತ ಜೀವನ ಮಟ್ಟವನ್ನು ಒದಗಿಸುವ ಸಲುವಾಗಿ ಮತ್ತು ಯಾವ ಉದ್ದೇಶಕ್ಕಾಗಿ ಮರಣ ಶಾಸನ ದಾನ ಮಾಡಲಾಗಿದೆಯೋ ಆ ಯಾವುದೇ ಇತರೆ ಉದ್ದೇಶಕ್ಕಾಗಿ ಮರಣ ಶಾಸನ ದಾನ ಮಾಡಲಾದ ಆಸ್ತಿಯನ್ನು ಉಪಯೋಗಿಸಲು ವ್ಯವಸ್ಥೆ ಮಾಡುವುದು ಮಂಡಳಿಯ ಅಗತ್ಯ ಬಾಧ್ಯತೆಯಾಗಿರತಕ್ಕದ್ದು:

ಮತ್ತೂ ಪರಂತು, ಮಂಡಲಿಯು, ಮರಣ ಶಾಸನ ದಾನದಲ್ಲಿ ನಮೂದಿಸಲಾದ ಸಂಪೂರ್ಣ ಮೊತ್ತವನ್ನು ಮರಣ ಶಾಸನದಲ್ಲಿ ಫಲಾನುಭವಿಯಾಗಿ ಹೆಸರಿಸಿದ ವಿಕಲತೆಯುಳ್ಳ ವ್ಯಕ್ತಿಗಳ ಅನನ್ಯ ಪ್ರಯೋಜನಕ್ಕಾಗಿ ಉಪಯೋಗಿಸಲು ಮಂಡಳಿಯು ಯಾವುದೇ ಬಾಧ್ಯತೆಗೆ ಒಳಗಾಗತಕ್ಕದ್ದಲ್ಲ.

(ಸಿ) ಯಾವುದೇ ಅನುಮೋದಿತ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ನೋಂದಾಯಿತ ಸಂಸ್ಥೆಗಳಿಗೆ ಹಣಕಾಸಿನ ನೆರವು ಒದಗಿಸುವುದಕ್ಕಾಗಿ ಪ್ರತಿ ಆರ್ಥಿಕ ವರ್ಷದಲ್ಲಿ ಅವಶ್ಯಕವೆಂದು ಪರಿಗಣಿಸಬಹುದಾದಂಥ ಮೊತ್ತವನ್ನು ಕೇಂದ್ರ ಸರ್ಕಾರದಿಂದ ಪಡೆಯತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, "ಅನುಮೋದಿತ ಕಾರ್ಯಕ್ರಮ" ಎಂಬ ಪದಾವಳಿಯ ಅರ್ಥವೆಂದರೆ,-

(ಎ) ವಿಕಲತೆಯುಳ್ಳ ವ್ಯಕ್ತಿಗಳಿಗಾಗಿ,-

(i) ಸಮುದಾಯದಲ್ಲಿ ಅನುಕೂಲಕರ ಪರಿಸರ ನಿರ್ಮಿಸುವುದರ ಮೂಲಕ;

(ii) ವಿಕಲತೆಯುಳ್ಳ ವ್ಯಕ್ತಿಗಳ ಕುಟುಂಬದ ಸದಸ್ಯರಿಗೆ ಸಲಹೆ ಮತ್ತು ತರಬೇತಿ ನೀಡುವುದರ ಮೂಲಕ;

(iii) ವಯಸ್ಕರ ತರಬೇತಿ ಘಟಕಗಳು, ಪ್ರತ್ಯೇಕ ಮತ್ತು ಸಮೂಹ ಗೃಹಗಳನ್ನು ಸ್ಥಾಪಿಸುವುದರ ಮೂಲಕ

- ಸಮುದಾಯದಲ್ಲಿ ಸ್ವತಂತ್ರವಾಗಿ ಬದುಕಲು ಪ್ರೋತ್ಸಾಹಿಸುವಂಥ ಯಾವುದೇ ಕಾರ್ಯಕ್ರಮ;

(ಬಿ) ವಿಕಲತೆಯುಳ್ಳ ವ್ಯಕ್ತಿಗಳ ಸಲುವಾಗಿ ಬಿಡುವಿನ ಆರೈಕೆ, ಸಾಕು ಕುಟುಂಬದ ಆರೈಕೆ ಅಥವಾ ಹಗಲು ಆರೈಕೆ ಸೇವೆಯನ್ನು ವೃದ್ಧಿಗೊಳಿಸುವ ಯಾವುದೇ ಕಾರ್ಯಕ್ರಮ;

(ಸಿ) ವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ವಸತಿ ನಿಲಯಗಳು ಮತ್ತು ವಸತಿ ಗೃಹಗಳನ್ನು ಸ್ಥಾಪಿಸುವುದು;

(ಡಿ) ವಿಕಲತೆಯುಳ್ಳ ವ್ಯಕ್ತಿಗಳ ಹಕ್ಕುಗಳಿಗೆ ತಮ್ಮ ಹಕ್ಕುಗಳ ನೆರವೇರಿಕೆಯ ಬಗ್ಗೆ ಪ್ರಯತ್ನಿಸಲು ಅವರ ಸ್ವ-ಸಹಾಯ ಗುಂಪುಗಳನ್ನು ಅಭಿವೃದ್ಧಿಪಡಿಸುವುದು;

(ಇ) ಪೋಷಕತ್ವಕ್ಕೆ ಅನುಮೋದನೆ ನೀಡುವುದಕ್ಕೆ ಸ್ಥಳೀಯ ಮಟ್ಟದ ಸಮಿತಿಯನ್ನು ರಚಿಸುವುದು; ಮತ್ತು

(ಎಫ್) ಟ್ರಸ್ಟಿನ ಉದ್ದೇಶಗಳನ್ನು ಈಡೇರಿಸುವಂಥ ಇತರ ಕಾರ್ಯಕ್ರಮಗಳು.

(3) (2)ನೇ ಉಪಪ್ರಕರಣದ (ಸಿ) ಖಂಡದ ಉದ್ದೇಶಗಳಿಗಾಗಿ ನಿಧಿಗಳನ್ನು ಮೀಸಲಿಡುವಲ್ಲಿ ವಿಕಲತೆಯುಳ್ಳ ಮಹಿಳೆಯರಿಗೆ ಅಥವಾ ತೀವ್ರತರ ವಿಕಲತೆಯುಳ್ಳ ವ್ಯಕ್ತಿಗಳಿಗೆ ಹಾಗೂ ವಿಕಲರಾದ ಹಿರಿಯ ನಾಗರಿಕರಿಗೆ ಆದ್ಯತೆ ನೀಡತಕ್ಕದ್ದು.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಗಳಿಗಾಗಿ,-

(ಎ) "ತೀವ್ರತರ ವಿಕಲತೆಯುಳ್ಳ ವ್ಯಕ್ತಿಗಳು" ಎಂಬ ಪದಗಳಿಗೆ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 (1996ರ 1) ಇದರ 56ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅದಕ್ಕೆ ಗೊತ್ತುಪಡಿಸಲಾದ ಅರ್ಥವನ್ನು ಹೊಂದಿರತಕ್ಕದ್ದು;

(ಬಿ) "ಹಿರಿಯ ನಾಗರಿಕ" ಎಂದರೆ ಅರವತ್ತೈದು ವರ್ಷ ಅಥವಾ ಅದಕ್ಕೂ ಹೆಚ್ಚು ವಯಸ್ಸಿನವನಾದ ವ್ಯಕ್ತಿ.

## ಅಧ್ಯಾಯ - V

## ನೋಂದಣಿ ಕಾರ್ಯವಿಧಾನ

**12. ನೋಂದಣಿ ಕಾರ್ಯವಿಧಾನ.-** (1) ವಿಕಲತೆಯುಳ್ಳ ವ್ಯಕ್ತಿಗಳ ಯಾವುದೇ ಸಂಘ, ವಿಕಲತೆಯುಳ್ಳ ವ್ಯಕ್ತಿಗಳ ಮಾತಾಪಿತೃಗಳ ಯಾವುದೇ ಸಂಘ ಅಥವಾ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣವು ಮುಖ್ಯ ಉದ್ದೇಶವಾಗಿರುವ ಯಾವುದೇ ಸ್ವಯಂ ಸೇವಾ ಸಂಸ್ಥೆಯು ನೋಂದಣಿಗಾಗಿ ಮಂಡಲಿಗೆ ಅರ್ಜಿ ಸಲ್ಲಿಸಬಹುದು.

(2) ನೋಂದಣಿಗಾಗಿ ಸಲ್ಲಿಸುವ ಅರ್ಜಿಯನ್ನು, ಮಂಡಲಿಯು ವಿನಿಯಮದ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಹಾಗೂ ಅಂಥ ಸ್ಥಳದಲ್ಲಿ ಸಲ್ಲಿಸತಕ್ಕದ್ದು ಮತ್ತು ಅದು ವಿನಿಯಮಗಳಲ್ಲಿ ಉಪಬಂಧಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು, ಮತ್ತು ಅದರ ಜೊತೆಗೆ ಅಂಥ ದಸ್ತಾವೇಜುಗಳು ಮತ್ತು ಅಂಥ ಫೀಜುಗಳು ಇರತಕ್ಕದ್ದು.

(3) ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದುದರ ಮೇಲೆ ಮಂಡಳಿಯು, ಅರ್ಜಿಯ ನೈಜತೆ ಮತ್ತು ಅದರಲ್ಲಿನ ಯಾವುವೇ ವಿವರಗಳ ಯಥಾರ್ಥತೆಯ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ಮಾಡಬಹುದು.

(4) ಮಂಡಲಿಯು, ಅಂಥ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಅರ್ಜಿದಾರನಿಗೆ ನೋಂದಣಿ ನೀಡತಕ್ಕದ್ದು ಅಥವಾ ಕಾರಣಗಳನ್ನು ದಾಖಲಿಸಿ ಅಂಥ ಅರ್ಜಿಯನ್ನು ನಿರಾಕರಿಸತಕ್ಕದ್ದು:

ಪರಂತು, ಅರ್ಜಿದಾರನಿಗೆ ನೋಂದಣಿಯನ್ನು ನಿರಾಕರಿಸಿರುವಲ್ಲಿ, ಸದರಿ ಅರ್ಜಿದಾರನು ಅವನ ಹಿಂದಿನ ಅರ್ಜಿಯಲ್ಲಿ ದೋಷಗಳೇನಾದರೂ ಇದ್ದರೆ, ಅವುಗಳನ್ನು ಸರಿಪಡಿಸಿದ ಮೇಲೆ ನೋಂದಣಿಗಾಗಿ ಮತ್ತೆ ಅರ್ಜಿ ಸಲ್ಲಿಸಬಹುದು.

## ಅಧ್ಯಾಯ - VI

## ಸ್ಥಳೀಯ ಮಟ್ಟದ ಸಮಿತಿಗಳು

**13. ಸ್ಥಳೀಯ ಮಟ್ಟದ ಸಮಿತಿಗಳ ರಚನೆ.-** (1) ಮಂಡಲಿಯು, ಕಾಲಕಾಲಕ್ಕೆ, ತಾನು ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದ ಸಲುವಾಗಿ ಒಂದು ಸ್ಥಳೀಯ ಮಟ್ಟದ ಸಮಿತಿಯನ್ನು ರಚಿಸತಕ್ಕದ್ದು.

(2) ಸ್ಥಳೀಯ ಮಟ್ಟದ ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,-

(ಎ) ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಕಮೀಷನರನ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಒಕ್ಕೂಟದ ಅಥವಾ ರಾಜ್ಯ ಸಿವಿಲ್ ಸೇವೆಯ ಒಬ್ಬ ಅಧಿಕಾರಿ;

(ಬಿ) ನೋಂದಾಯಿತ ಸಂಸ್ಥೆಯ ಒಬ್ಬ ಪ್ರತಿನಿಧಿ; ಮತ್ತು

(ಸಿ) ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 (1996ರ 1) ಇದರ 2ನೇ ಪ್ರಕರಣದ (ಟಿ) ಖಂಡದಲ್ಲಿ ಪರಿಭಾಷಿಸಲಾದಂಥ ವಿಕಲ ವ್ಯಕ್ತಿ.

(3) ಸ್ಥಳೀಯ ಮಟ್ಟದ ಸಮಿತಿಯು, ಅದರ ರಚನೆಯ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಮಂಡಳಿಯಿಂದ ಪುನಃ ರಚಿತವಾಗುವ ಅವಧಿಯವರೆಗೆ ಕಾರ್ಯವನ್ನು ಮುಂದುವರಿಸತಕ್ಕದ್ದು.

(4) ಸ್ಥಳೀಯ ಮಟ್ಟದ ಸಮಿತಿಯು ಕನಿಷ್ಠಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆ ಅಥವಾ ಅವಶ್ಯಕವಾಗಬಹುದಾದಂಥ ಮಧ್ಯಂತರದಲ್ಲಿ ಸಭೆ ಸೇರತಕ್ಕದ್ದು.

**14. ಪಾಲಕನಾಗಿರಲು ನೇಮಕಾತಿ.-** (1) ವಿಕಲತೆಯುಳ್ಳ ವ್ಯಕ್ತಿಗಳ ತಂದೆ-ತಾಯಿಗಳು ಅಥವಾ ಆತನ ಸಂಬಂಧಿಕರು ಸ್ಥಳೀಯ ಮಟ್ಟದ ಸಮಿತಿಗೆ, ವಿಕಲತೆಯುಳ್ಳ ವ್ಯಕ್ತಿಗಳ ಪಾಲಕನಾಗಿ ಕಾರ್ಯನಿರ್ವಹಿಸಲು ತನ್ನ ಆಯ್ಕೆಯ ಯಾರೇ ವ್ಯಕ್ತಿಯ ನೇಮಕಾತಿಗಾಗಿ ಅರ್ಜಿ ಸಲ್ಲಿಸಬಹುದು.

(2) ಯಾವುದೇ ನೋಂದಾಯಿತ ಸಂಸ್ಥೆಯು, ವಿಕಲತೆಯುಳ್ಳ ವ್ಯಕ್ತಿಗಾಗಿ ಪಾಲಕನನ್ನು ನೇಮಕ ಮಾಡುವುದಕ್ಕಾಗಿ ಸ್ಥಳೀಯ ಮಟ್ಟದ ಸಮಿತಿಗೆ ನಿಯಮಿಸಿದ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು:

ಪರಂತು, ವಿಕಲತೆಯುಳ್ಳ ವ್ಯಕ್ತಿಯ ಪಾಲಕನ ಸಮ್ಮತಿಯನ್ನು ಪಡೆದಿರುವ ಹೊರತು, ಯಾವುದೇ ಅಂಥ ಅರ್ಜಿಯನ್ನು ಸ್ಥಳೀಯ ಮಟ್ಟದ ಸಮಿತಿಯು ಪುರಸ್ಕರಿಸತಕ್ಕದ್ದಲ್ಲ.

(3) ಪಾಲಕನ ನೇಮಕಾತಿಗಾಗಿ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸುವಾಗ ಸ್ಥಳೀಯ ಮಟ್ಟದ ಸಮಿತಿಯು,-

(ಎ) ವಿಕಲತೆಯುಳ್ಳ ವ್ಯಕ್ತಿಗೆ ಪಾಲಕನ ಅಗತ್ಯವಿದೆಯೇ;

(ಬಿ) ಯಾವ ಉದ್ದೇಶಕ್ಕಾಗಿ ವಿಕಲತೆಯುಳ್ಳ ವ್ಯಕ್ತಿಗೆ ಪಾಲಕತ್ವದ ಅಗತ್ಯವಿದೆ

- ಎಂಬುದನ್ನು ಪರಿಗಣಿಸತಕ್ಕದ್ದು.

(4) ಸ್ಥಳೀಯ ಮಟ್ಟದ ಸಮಿತಿಯು, (1) ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ಸ್ವೀಕರಿಸಿದ ಅರ್ಜಿಗಳನ್ನು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಸ್ವೀಕರಿಸತಕ್ಕದ್ದು, ಪರಿಶೀಲಿಸತಕ್ಕದ್ದು ಮತ್ತು ತೀರ್ಮಾನಿಸತಕ್ಕದ್ದು:

ಪರಂತು, ಪಾಲಕನ ನೇಮಕಾತಿಗಾಗಿ ಶಿಫಾರಸ್ಸು ಮಾಡುವಾಗ, ಸ್ಥಳೀಯ ಮಟ್ಟದ ಸಮಿತಿಯು ಪಾಲಕನು ನೆರವೇರಿಸಬೇಕಾಗಿರುವ ಬಾಧ್ಯತೆಗಳ ಬಗ್ಗೆ ವ್ಯವಸ್ಥೆ ಮಾಡತಕ್ಕದ್ದು.

(5) ಸ್ಥಳೀಯ ಮಟ್ಟದ ಸಮಿತಿಯು, ತಾನು ಸ್ವೀಕರಿಸಿದ ಅರ್ಜಿಗಳ ವಿವರಗಳನ್ನು ಮತ್ತು ಅದರ ಮೇಲೆ ಮಾಡಿದ ಆದೇಶಗಳನ್ನು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಮಧ್ಯಂತರದಲ್ಲಿ ಮಂಡಲಿಗೆ ಕಳುಹಿಸತಕ್ಕದ್ದು.

**15. ಪಾಲಕನ ಕರ್ತವ್ಯಗಳು.-** ಈ ಅಧ್ಯಾಯದ ಮೇರೆಗೆ ವಿಕಲತೆಯುಳ್ಳ ವ್ಯಕ್ತಿಯ ಪಾಲಕನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು, ಅಗತ್ಯವಾದಾಗಲೆಲ್ಲ, ಅಂಥ ವಿಕಲತೆಯುಳ್ಳ ವ್ಯಕ್ತಿಯನ್ನು ಮತ್ತು ಆತನ ಆಸ್ತಿಯನ್ನು ನೋಡಿಕೊಳ್ಳತಕ್ಕದ್ದು ಅಥವಾ ವಿಕಲತೆಯುಳ್ಳ ವ್ಯಕ್ತಿಯ ಪೋಷಣೆಗಾಗಿ ಜವಾಬ್ದಾರನಾಗಿರತಕ್ಕದ್ದು.

**16. ಪಾಲಕನು ತಪಶೀಲು ಪಟ್ಟಿ ಮತ್ತು ವಾರ್ಷಿಕ ಲೆಕ್ಕ ಪತ್ರಗಳನ್ನು ಒದಗಿಸುವುದು.-** (1) 14ನೇ ಪ್ರಕರಣದ ಮೇರೆಗೆ ಪಾಲಕನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು, ಆತನ ನೇಮಕದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ವಿಕಲತೆಯುಳ್ಳ ವ್ಯಕ್ತಿಗೆ ಸೇರಿರುವ ಸ್ಥಿರಸ್ವತ್ತಿನ ಮತ್ತು ವಿಕಲತೆಯುಳ್ಳ ವ್ಯಕ್ತಿಯ ಪರವಾಗಿ ಸ್ವೀಕರಿಸಿದ ಎಲ್ಲಾ ಆಸ್ತಿಗಳ ಹಾಗೂ ಇತರ ಚರಸ್ವತ್ತಿನ ವಿವರಣಾ ಪಟ್ಟಿಯನ್ನು, ಅಂಥ ವಿಕಲತೆಯುಳ್ಳ ವ್ಯಕ್ತಿಗೆ ಬರಬೇಕಾದ ಎಲ್ಲಾ ಕ್ಲೇಮುಗಳು ಮತ್ತು ಅವನಿಂದ ಬರಬೇಕಾದ ಎಲ್ಲಾ ಋಣಗಳು ಮತ್ತು ಹೊಣೆಗಾರಿಕೆಗಳ ವಿವರಪಟ್ಟಿಯೊಡನೆ ಅವನನ್ನು ನೇಮಕ ಮಾಡಿದ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು.

(2) ಪ್ರತಿಯೊಬ್ಬ ಪಾಲಕನು, ತನ್ನ ಪ್ರಭಾರದಲ್ಲಿನ ಸ್ವತ್ತು ಮತ್ತು ಆಸ್ತಿಗಳ ಲೆಕ್ಕಪತ್ರವನ್ನು ವಿಕಲತೆಯುಳ್ಳ ವ್ಯಕ್ತಿಯ ನಿಮಿತ್ತ ಸ್ವೀಕರಿಸಲಾದ ಮತ್ತು ಬಟವಾಡೆ ಮಾಡಲಾದ ಮೊತ್ತಗಳನ್ನು ಮತ್ತು ಅವನ ಬಳಿ ಉಳಿದಿರುವ ಶಿಲ್ಕುಗಳನ್ನು ಪ್ರತಿಯೊಂದು ಹಣಕಾಸು ವರ್ಷ ಮುಕ್ತಾಯಗೊಳ್ಳುವ ಮೂರು ತಿಂಗಳ ಅವಧಿಯೊಳಗೆ ಅವನನ್ನು ನೇಮಕ ಮಾಡಿದ ಪ್ರಾಧಿಕಾರಿಗೂ ಸಹ ಒದಗಿಸತಕ್ಕದ್ದು.

**17. ಪಾಲಕನನ್ನು ತೆಗೆದುಹಾಕುವುದು.–** (1) ವಿಕಲತೆಯುಳ್ಳ ವ್ಯಕ್ತಿಯ ತಂದೆ–ತಾಯಿ ಅಥವಾ ಸಂಬಂಧಿಕರು ಅಥವಾ ನೋಂದಾಯಿತ ಸಂಸ್ಥೆಯು, ಆ ಪೋಷಕನು, ಸಂಘಕ್ಕೆ,–

(ಎ) ವಿಕಲತೆಯುಳ್ಳ ವ್ಯಕ್ತಿಯನ್ನು ದುರುಪಯೋಗಪಡಿಸಿಕೊಂಡಿದ್ದಾನೆಂದು ಅಥವಾ ನಿರ್ಲಕ್ಷಿಸಿದ್ದಾನೆಂದು;

(ಬಿ) ಆಸ್ತಿಯನ್ನು ದುರುಪಯೋಗಪಡಿಸಿಕೊಂಡಿದ್ದಾನೆಂದು ಅಥವಾ ನಿರ್ಲಕ್ಷಿಸಿದ್ದಾನೆಂದು

– ಕಂಡುಬಂದಾಗ, ಅದು ನಿಯಮಿಸಿದ ಪ್ರಕ್ರಿಯೆಗನುಸಾರ ಅಂಥ ಪಾಲಕನನ್ನು ತೆಗೆದುಹಾಕುವುದಕ್ಕಾಗಿ ಸಮಿತಿಗೆ ಅರ್ಜಿ ಸಲ್ಲಿಸಬಹುದು.

(2) ಸಮಿತಿಯು, ಅಂಥ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದಕ್ಕೆ, ತೆಗೆದುಹಾಕಲು ಆಧಾರವಿದೆಯೆಂದು ಮನಗಂಡರೆ, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅಂಥ ಪಾಲಕನನ್ನು ತೆಗೆದು ಹಾಕಬಹುದು ಮತ್ತು ಆತನ ಸ್ಥಾನದಲ್ಲಿ ಹೊಸ ಪಾಲಕನನ್ನು ನೇಮಕ ಮಾಡಬಹುದು ಅಥವಾ ಅಂಥ ಪಾಲಕನು ದೊರೆಯದಿದ್ದರೆ, ವಿಕಲತೆಯುಳ್ಳ ವ್ಯಕ್ತಿಯ ಆರೈಕೆ ಮತ್ತು ಸಂರಕ್ಷಣೆಗಾಗಿ ಅವಶ್ಯಕವಿರಬಹುದಾದಂಥ ಇತರ ಏರ್ಪಾಡುಗಳನ್ನು ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ತೆಗೆದು ಹಾಕಲಾದ ಯಾರೇ ವ್ಯಕ್ತಿಯು, ವಿಕಲತೆಯುಳ್ಳ ವ್ಯಕ್ತಿಯ ಎಲ್ಲಾ ಆಸ್ತಿಯ ಪ್ರಭಾರವನ್ನು ಹೊಸ ಪಾಲಕನಿಗೆ ಒಪ್ಪಿಸುವುದಕ್ಕೆ ಮತ್ತು ಅವನು ಸ್ವೀಕರಿಸಿದ ಅಥವಾ ಬಟವಾಡೆ ಮಾಡಿದ ಎಲ್ಲಾ ಹಣಗಳ ಲೆಕ್ಕಪತ್ರ ಕೊಡುವುದಕ್ಕೆ ಬದ್ಧನಾಗಿರತಕ್ಕದ್ದು.

**ವಿವರಣೆ.–** ಈ ಅಧ್ಯಾಯದ ಉದ್ದೇಶಗಳಿಗಾಗಿ, "ಸಂಬಂಧಿಕ" ಎಂಬ ಪದದಲ್ಲಿ ರಕ್ತ ಸಂಬಂಧಿಯಾಗಿ ವಿವಾಹದ ಮೂಲಕ ಅಥವಾ ದತ್ತು ಸ್ವೀಕಾರದ ಮೂಲಕ ವಿಕಲತೆಯುಳ್ಳ ವ್ಯಕ್ತಿಗೆ ಸಂಬಂಧಪಟ್ಟ ಯಾರೇ ವ್ಯಕ್ತಿಯು ಒಳಗೊಳ್ಳುತ್ತಾನೆ.

## ಅಧ್ಯಾಯ – VII

## ಉತ್ತರದಾಯಿತ್ವ ಮತ್ತು ಮೇಲ್ವಿಚಾರಣೆ

**18. ಉತ್ತರದಾಯಿತ್ವ.–** (1) ಮಂಡಲಿಯ ಸ್ವಾಧೀನದಲ್ಲಿರುವ ಲೆಕ್ಕ ಪುಸ್ತಕಗಳು ಮತ್ತು ದಸ್ತಾವೇಜುಗಳು ಯಾವುದೇ ನೋಂದಾಯಿತ ಸಂಸ್ಥೆಯ ತಪಾಸಣೆಗೆ ಮುಕ್ತವಾಗಿರತಕ್ಕದ್ದು.

(2) ಯಾವುದೇ ನೋಂದಾಯಿತ ಸಂಸ್ಥೆಯು, ಮಂಡಲಿಯು ನಿರ್ವಹಿಸಿಕೊಂಡು ಬಂದಿರುವ ಯಾವುದೇ ಲೆಕ್ಕ ಪುಸ್ತಕ ಅಥವಾ ದಸ್ತಾವೇಜಿನ ಪ್ರತಿಯನ್ನು ಪಡೆಯಲು ಮಂಡಲಿಗೆ ಲಿಖಿತದಲ್ಲಿ ಕೋರಿಕೆಯನ್ನು ಸಲ್ಲಿಸಬಹುದು.

(3) ನೋಂದಾಯಿತ ಸಂಸ್ಥೆಯು ಯಾವುದೇ ಲೆಕ್ಕ ಪುಸ್ತಕ ಅಥವಾ ದಸ್ತಾವೇಜನ್ನು ನೋಡಲು ಅನುಮತಿಸುವುದಕ್ಕಾಗಿ ಮಂಡಳಿಯು, ಅಗತ್ಯವೆಂದು ಭಾವಿಸುವಂಥ ವಿನಿಯಮಗಳನ್ನು ರಚಿಸತಕ್ಕದ್ದು.

**19. ಮೇಲ್ವಿಚಾರಣೆ.–** ಮಂಡಲಿಯು, ತನ್ನ ಕಡೆಯಿಂದ ಹಣಕಾಸಿನ ನೆರವು ಕೋರುವ ನೋಂದಾಯಿತ ಸಂಸ್ಥೆಗಳ ನಿಧಿ ನೀಡಿಕೆ ಪೂರ್ವದ ಸ್ಥಿತಿಗತಿಗಳನ್ನು ಮೌಲ್ಯಮಾಪನ ಮಾಡುವ ಕಾರ್ಯವಿಧಾನವನ್ನು ವಿನಿಯಮಗಳ ಮೂಲಕ ನಿರ್ಧರಿಸತಕ್ಕದ್ದು ಮತ್ತು ಅಂಥ ವಿನಿಯಮಗಳು ಟ್ರಸ್ಟ್‌ನಿಂದ ಹಣಕಾಸಿನ ನೆರವು ಪಡೆಯುವ ನೋಂದಾಯಿತ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವ ಮಾರ್ಗದರ್ಶಿ ಸೂತ್ರಗಳ ಬಗ್ಗೆ ಸಹ ಉಪಬಂಧ ಕಲ್ಪಿಸಬಹುದು.

**20. ವಾರ್ಷಿಕ ಸಾಮಾನ್ಯ ಸಭೆ.–** (1) ಮಂಡಲಿಯು ಪ್ರತಿ ವರ್ಷ ನೋಂದಾಯಿತ ಸಂಸ್ಥೆಗಳ ವಾರ್ಷಿಕ ಸಾಮಾನ್ಯ ಸಭೆ ನಡೆಸತಕ್ಕದ್ದು, ಮತ್ತು ಒಂದು ಸಾಮಾನ್ಯ ಸಭೆಯ ದಿನಾಂಕ ಮತ್ತು ಇನ್ನೊಂದು ಆ ತರುವಾಯದ ಸಾಮಾನ್ಯ ಸಭೆಯ ದಿನಾಂಕ ಇವುಗಳ ನಡುವಿನ ಅಂತರವು ಆರು ತಿಂಗಳಿಗೆ ಮೀರತಕ್ಕದ್ದಲ್ಲ.

(2) ಹಿಂದಿನ ವರ್ಷದಲ್ಲಿನ ಲೆಕ್ಕಪತ್ರಗಳ ವಿವರಪಟ್ಟಿ ಮತ್ತು ಅದರ ಕಾರ್ಯಚಟುವಟಿಕೆಗಳ ದಾಖಲೆಗಳೊಂದಿಗಿನ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಮಂಡಳಿಯು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಸಮಯಕ್ಕೆ ಪ್ರತಿಯೊಂದು ನೋಂದಾಯಿತ ಸಂಸ್ಥೆಗೆ ಕಳುಹಿಸತಕ್ಕದ್ದು.

(3) ಅಂಥ ಸಭೆಯ ಕೋರಂ ಸಂಖ್ಯೆಯು ನೋಂದಾಯಿತ ಸಂಸ್ಥೆಗಳ ವ್ಯಕ್ತಿಗಳ ಪೈಕಿ ವಿನಿಯಮಗಳ ಮೂಲಕ ನಿರ್ಧರಿಸಬಹುದಾದಷ್ಟು ಸಂಖ್ಯೆ ಆಗಿರತಕ್ಕದ್ದು.

## ಅಧ್ಯಾಯ – VIII

## ಹಣಕಾಸು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ

**21. ಕೇಂದ್ರ ಸರ್ಕಾರದಿಂದ ಅನುದಾನಗಳು.–** ಸಂಸತ್ತು ಕಾನೂನು ಮೂಲಕ, ಈ ಬಗ್ಗೆ ಮಾಡಿದ ಯುಕ್ತ ಧನವಿನಿಯೋಗದ ತರುವಾಯ, ಕೇಂದ್ರ ಸರ್ಕಾರವು ಮೂಲ ನಿಧಿಯಾಗಿ ಒಂದುನೂರು ಕೋಟಿ ರೂಪಾಯಿಗಳ ಏಕಕಾಲದ ವಂತಿಗೆಯನ್ನು ಟ್ರಸ್ಟಿಗೆ ನೀಡಬಹುದು, ಮತ್ತು ಅದರಿಂದ ಬರುವ ಆದಾಯವನ್ನು ಈ ಅಧಿನಿಯಮದ ಮೇರೆಗೆ ಟ್ರಸ್ಟಿನ ಉದ್ದೇಶಗಳನ್ನು ಈಡೇರಿಸಲು ಉಪಯೋಗಿಸಬಹುದು.

**22. ನಿಧಿ.–** (1) ಮನೋವಿಕಾರ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಸ್ಥಾಪಿತವಾಗತಕ್ಕದ್ದು ಮತ್ತು ಅದಕ್ಕೆ ಈ ಕೆಳಕಂಡ ಹಣಗಳು ಜಮೆಯಾಗತಕ್ಕದ್ದು,–

(ಎ) ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಎಲ್ಲಾ ಹಣಗಳು;

(ಬಿ) ಅನುದಾನಗಳು, ಕಾಣಿಕೆಗಳು, ದೇಣಿಗೆಗಳು, ಧನ–ದಾನಗಳು, ಮರಣ ಶಾಸನ ದಾನಗಳು ಅಥವಾ ವರ್ಗಾವಣೆಗಳು – ಇವುಗಳ ರೂಪದಲ್ಲಿ ಟ್ರಸ್ಟ್ ಸ್ವೀಕರಿಸಿದ ಎಲ್ಲಾ ಹಣಗಳು;

(ಸಿ) ಯಾವುದೇ ಇತರ ರೀತಿಯಲ್ಲಿ ಅಥವಾ ಯಾವುದೇ ಇತರ ಮೂಲದಿಂದ ಟ್ರಸ್ಟು ಸ್ವೀಕರಿಸಿದ ಎಲ್ಲಾ ಹಣಗಳು.

(2) ನಿಧಿಗೆ ಸೇರಿದ ಎಲ್ಲಾ ಹಣಗಳನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟು, ಮಂಡಲಿಯು ನಿರ್ಧರಿಸಬಹುದಾದಂಥ ಬ್ಯಾಂಕುಗಳಲ್ಲಿ ಅಂಥ ರೀತಿಯಲ್ಲಿ ಠೇವಣಿ ಇಡತಕ್ಕದ್ದು ಅಥವಾ ತೊಡಗಿಸತಕ್ಕದ್ದು.

(3) ಮಂಡಲಿಯು 10ನೇ ಪ್ರಕರಣದ ಮೇರೆಗಿನ ತನ್ನ ಯಾವುವೇ ಚಟುವಟಿಕೆಗಳ ಸಂಬಂಧದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಕ್ಕಾಗಿ ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಕರ್ತವ್ಯಗಳನ್ನು ನೆರವೇರಿಸುವಲ್ಲಿ ವಹಿಸಿದ ವೆಚ್ಚಗಳು ಸೇರಿದಂತೆ ಟ್ರಸ್ಟಿನ ಆಡಳಿತಾತ್ಮಕ ಮತ್ತು ಇತರ ವೆಚ್ಚಗಳನ್ನು ಭರಿಸುವುದಕ್ಕಾಗಿ ನಿಧಿಗಳನ್ನು ವಿನಿಯೋಗಿಸತಕ್ಕದ್ದು.

**23. ಆಯವ್ಯಯ ಪತ್ರ.–** ಮಂಡಲಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿ ವರ್ಷ ಮುಂದಿನ ಹಣಕಾಸು ವರ್ಷದ ಸಂಬಂಧದಲ್ಲಿ ಟ್ರಸ್ಟಿನ ಜಮೆಗಳು ಮತ್ತು ವೆಚ್ಚಗಳನ್ನು ತೋರಿಸುವಂಥ ಆಯವ್ಯಯ ಪತ್ರವನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**24. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಮಂಡಲಿಯು, ಟ್ರಸ್ಟಿನ ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಲಾಭ ಮತ್ತು ನಷ್ಟದ ಲೆಕ್ಕವೂ ಒಳಗೊಂಡಂತೆ ವಾರ್ಷಿಕ ಲೆಕ್ಕಪತ್ರಗಳ ವಿವರಣ ಪಟ್ಟಿಯನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಆ ಸರ್ಕಾರವು ನೀಡಬಹುದಾದಂಥ ಸಾಮಾನ್ಯ ನಿರ್ದೇಶನಕ್ಕೆ ಅನುಗುಣವಾಗಿ ತಯಾರಿಸತಕ್ಕದ್ದು.

(2) ಟ್ರಸ್ಟಿನ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಅಂತರಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ, ಅವನು ವಹಿಸಿದ ಯಾವುದೇ ವೆಚ್ಚವನ್ನು, ಮಂಡಳಿಯು, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಟ್ರಸ್ಟಿನ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಂಬಂಧದಲ್ಲಿ ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಮತ್ತು ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಯ ಸಂಬಂಧದಲ್ಲಿ ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಂಥ ಲೆಕ್ಕಪರಿಶೋಧನೆಯ ಬಗ್ಗೆ ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಹಾಗೂ ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ಲೆಕ್ಕದ ಪುಸ್ತಕಗಳು, ಸಂಬಂಧಪಟ್ಟ ವೋಚರುಗಳು, ದಸ್ತಾವೇಜುಗಳು ಮತ್ತು ಕಾಗದ ಪತ್ರಗಳನ್ನು

ಹಾಜರುಪಡಿಸುವಂತೆ ಒತ್ತಾಯಿಸುವ ಮತ್ತು ಟ್ರಸ್ಟಿನ ಯಾವುದೇ ಕಛೇರಿಗಳ ಪರಿಶೀಲನೆಯನ್ನು ನಡೆಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಥವಾ ಅವನಿಂದ ಈ ಬಗ್ಗೆ ನೇಮಕಗೊಂಡ ಇತರ ಯಾರೇ ವ್ಯಕ್ತಿಯು, ಪ್ರಮಾಣೀಕರಿಸಿದಂತೆ, ಟ್ರಸ್ಟಿನ ಲೆಕ್ಕಪತ್ರಗಳನ್ನು ಮತ್ತು ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಆ ಸರ್ಕಾರವು ಅವುಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವ ವ್ಯವಸ್ಥೆ ಮಾಡತಕ್ಕದ್ದು.

**25. ವಾರ್ಷಿಕ ವರದಿ.–** ಮಂಡಲಿಯು, ಪ್ರತಿ ವರ್ಷಕ್ಕೊಮ್ಮೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಹಿಂದಿನ ವರ್ಷದ ತನ್ನ ಕಾರ್ಯಚಟುವಟಿಕೆಗಳ ಯಥಾರ್ಥ ಮತ್ತು ಪೂರ್ಣ ವಿವರಣೆಯನ್ನು ನೀಡುವ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವ ವ್ಯವಸ್ಥೆ ಮಾಡತಕ್ಕದ್ದು.

**26. ಆದೇಶ ಇತ್ಯಾದಿಗಳ ಅಧಿಪ್ರಮಾಣನ.–** ಮಂಡಲಿಯ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಮತ್ತು ಟ್ರಸ್ಟಿನ ಹೆಸರಿನಲ್ಲಿ ಹೊರಡಿಸಲಾದ ಲಿಖಿತಗಳನ್ನು ಅಧ್ಯಕ್ಷನ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಅಥವಾ ಈ ಬಗ್ಗೆ ಅಧ್ಯಕ್ಷನಿಂದ ಅಧಿಕೃತನಾದ ಇತರ ಯಾರೇ ಅಧಿಕಾರಿಯ ರುಜುವಿನ ಮೂಲಕ ಅಧಿಪ್ರಮಾಣನ ಮಾಡತಕ್ಕದ್ದು.

**27. ವಿವರ ಪಟ್ಟಿಕೆಗಳು ಮತ್ತು ಮಾಹಿತಿ.–** ಮಂಡಲಿಯು, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಅದಕ್ಕೆ ಒದಗಿಸತಕ್ಕದ್ದು.

## ಅಧ್ಯಾಯ – IX

### ಸಂಕೀರ್ಣ

**28. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದಲ್ಲಿ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಮಂಡಲಿಯು ಈ ಅಧಿನಿಯಮದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ, ಕಾರ್ಯನೀತಿಯ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಲಿಖಿತದಲ್ಲಿ ತನಗೆ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ಕೊಡುವುದಕ್ಕೆ ಮುಂಚೆ, ಮಂಡಲಿಗೆ, ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಧ್ಯವಾಗಬಹುದಾದಷ್ಟು ಅವಕಾಶವನ್ನು ಕೊಡತಕ್ಕದ್ದು.

(2) ಪ್ರಶ್ನೆಯು ಕಾರ್ಯನೀತಿಗೆ ಸಂಬಂಧಿಸಿದೆಯೇ, ಇಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**29. ಮಂಡಲಿಯನ್ನು ಅಧಿಕ್ರಮಣಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ನೋಂದಾಯಿತ ಸಂಸ್ಥೆಯ ದೂರಿನ ಮೇಲೆ ಅಥವಾ ಇತರ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಆ ಮಂಡಲಿಯು ಅದಕ್ಕೆ ವಿಧಿಸಿದ ಕರ್ತವ್ಯವನ್ನು ನೆರವೇರಿಸಲು ಅಸಮರ್ಥವಾಗಿದೆ ಅಥವಾ ಕರ್ತವ್ಯ ನೆರವೇರಿಸುವಲ್ಲಿ ಪದೇಪದೇ ತಪ್ಪು ಮಾಡಿದೆ ಎಂದು ನಂಬಲು ಕಾರಣವಿದ್ದರೆ, ಮಂಡಲಿಗೆ ಅದನ್ನು ಏಕೆ ಅಧಿಕ್ರಮಣಗೊಳಿಸಕೂಡದು ಎಂದು ಕೇಳಿ ಕೇಂದ್ರ ಸರ್ಕಾರವು ನೋಟೀಸನ್ನು ಜಾರಿಗೊಳಿಸಬಹುದು:

ಪರಂತು, ಕೇಂದ್ರ ಸರ್ಕಾರವು, ಮಂಡಲಿಯನ್ನು ಏಕೆ ಅಧಿಕ್ರಮಣಗೊಳಿಸಕೂಡದು ಎಂಬ ಬಗ್ಗೆ ಲಿಖಿತ ನೋಟೀಸು ನೀಡಿ ಉತ್ತರಿಸಲು ಮಂಡಲಿಗೆ ಸೂಕ್ತ ಅವಕಾಶ ನೀಡಿದ್ದ ಹೊರತು, ಮಂಡಳಿಯನ್ನು ಅಧಿಕ್ರಮಣಗೊಳಿಸುವ ಆದೇಶವನ್ನು ಮಾಡತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ನಂತರ ಮತ್ತು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸುವುದರ ಮೂಲಕ ಆರು ತಿಂಗಳಿಗೆ ಮೀರದ ಅವಧಿಯವರೆಗೆ ಮಂಡಳಿಯನ್ನು ಅಧಿಕ್ರಮಣಗೊಳಿಸಬಹುದು:

ಪರಂತು, ಅಧಿಕ್ರಮಣದ ಅವಧಿಯ ಮುಕ್ತಾಯದ ನಂತರ ಕೇಂದ್ರ ಸರ್ಕಾರವು 3ನೇ ಪ್ರಕರಣದ ಅನುಸಾರ, ಮಂಡಳಿಯನ್ನು ಪುನರ್‌ರಚಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ತರುವಾಯ,-

(ಎ) ಮಂಡಲಿಯ ಎಲ್ಲಾ ಸದಸ್ಯರು, ಅವರ ಪದಾವಧಿಯು ಮುಕ್ತಾಯವಾಗಿಲ್ಲದಿದ್ದರೂ, ಅಧಿಕ್ರಮಣದ ದಿನಾಂಕದಿಂದ ಅಂಥ ಸದಸ್ಯರಾಗಿ ತಮ್ಮ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಟ್ರಸ್ಟ್ ಅಥವಾ ಟ್ರಸ್ಟಿನ ಪರವಾಗಿ ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಅಥವಾ ನಿರ್ವಹಿಸಬಹುದಾದ ಎಲ್ಲ ಕರ್ತವ್ಯಗಳನ್ನು ಅಧಿಕ್ರಮಣದ ಅವಧಿಯಲ್ಲಿ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಅಥವಾ ನೆರವೇರಿಸತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಧಿಕ್ರಮಣದ ಅವಧಿಯು ಮುಕ್ತಾಯವಾದ ತರುವಾಯ, ಕೇಂದ್ರ ಸರ್ಕಾರವು,-

(ಎ) ಅಧಿಕ್ರಮಣದ ಅವಧಿಯನ್ನು ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಹೆಚ್ಚಿನ ಅವಧಿಯವರೆಗೆ ವಿಸ್ತರಿಸಬಹುದು. ಆದರೆ ಅಧಿಕ್ರಮಣದ ಅವಧಿಯು ಒಟ್ಟಾರೆ ಆರು ತಿಂಗಳಿಗೆ ಮೀರಬಾರದು;

(ಬಿ) 3ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಮಂಡಳಿಯನ್ನು ಪುನರ್ ರಚಿಸಬಹುದು.

**30. ಆದಾಯ ತೆರಿಗೆಯಿಂದ ವಿನಾಯಿತಿ.**- ಆದಾಯ-ತೆರಿಗೆ ಅಧಿನಿಯಮ, 1961 (1961ರ 43) ಇದರಲ್ಲಿ ಅಥವಾ ಆದಾಯ, ಲಾಭ ಅಥವಾ ಪ್ರಾಪ್ತಿಗಳ ಮೇಲಿನ ತೆರಿಗೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಟ್ರಸ್ಟು, ತಾನು ಪಡೆದ ಆದಾಯ, ಲಾಭ ಅಥವಾ ಪ್ರಾಪ್ತಿಗಳ ಸಂಬಂಧದಲ್ಲಿ ಆದಾಯ ತೆರಿಗೆಯನ್ನು ಅಥವಾ ಯಾವುದೇ ಇತರ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಬದ್ಧವಾಗಿರತಕ್ಕದ್ದಲ್ಲ.

**31. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.**- ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟ ಅಥವಾ ಹಾನಿಗಾಗಿ ಈ ಅಧಿನಿಯಮದ ಮೇರೆಗೆ ಕರ್ತವ್ಯಗಳನ್ನು ನಿರ್ವಹಿಸುವ, ಕೇಂದ್ರ ಸರ್ಕಾರದ ಅಥವಾ ಟ್ರಸ್ಟಿನ ಅಥವಾ ಮಂಡಳಿಯ ಯಾರೇ ಸದಸ್ಯನ ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಅಥವಾ ಯಾರೇ ಅಧಿಕಾರಿ ಅಥವಾ ಇತರ ನೌಕರನ ಅಥವಾ ಮಂಡಳಿಯ ಮೂಲಕ ಅಧಿಕೃತನಾದ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**ವಿವರಣೆ.**- ಈ ಪ್ರಕರಣದ ಉದ್ದೇಶಗಳಿಗಾಗಿ "ಸದ್ಭಾವನೆ" ಎಂಬ ಪದವು ಭಾರತ ದಂಡ ಸಂಹಿತೆ, 1860 (1860ರ 45) ಇದರಲ್ಲಿ ಅದಕ್ಕೆ ಗೊತ್ತುಪಡಿಸಿದ ಅರ್ಥವನ್ನೇ ಹೊಂದಿರತಕ್ಕದ್ದು.

**32. ಟ್ರಸ್ಟಿನ ಅಧ್ಯಕ್ಷ, ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು.**- ಟ್ರಸ್ಟಿನ ಎಲ್ಲಾ ಸದಸ್ಯರು, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇತರ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಯಾವುದೇ ಉಪಬಂಧಗಳಿಗನುಸಾರವಾಗಿ ಕಾರ್ಯವನ್ನು ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸಿರುವುದಾಗಿ ತಾತ್ಪರ್ಯವಾದಾಗ ಅವರನ್ನು ಭಾರತ ದಂಡ ಸಂಹಿತೆ, 1860ರ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**33. ಪ್ರತ್ಯಾಯೋಜನೆ.**- ಮಂಡಲಿಯು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು, ಟ್ರಸ್ಟಿನ ಅಧ್ಯಕ್ಷನಿಗೆ ಅಥವಾ ಯಾರೇ ಸದಸ್ಯನಿಗೆ ಅಥವಾ ಯಾರೇ ಅಧಿಕಾರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ತಾನು ಅವಶ್ಯಕವೆಂದು ಭಾವಿಸಬಹುದಾದಂಥ (35ನೇ ಪ್ರಕರಣದ ಮೇರೆಗಿನ ವಿನಿಯಮ ರಚನಾಧಿಕಾರವನ್ನು ಹೊರತುಪಡಿಸಿ) ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು.

**34. ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ವಿಷಯಗಳ ಅಥವಾ ಆ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು,-

(ಎ) ನೋಂದಾಯಿತ ಸಂಸ್ಥೆಯನ್ನು ಪ್ರತಿನಿಧಿಸುವ ವ್ಯಕ್ತಿಗಳನ್ನು 3ನೇ ಪ್ರಕರಣದ (4)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವ ಕಾರ್ಯವಿಧಾನಕ್ಕೆ ಅನುಸಾರವಾಗಿ ಚುನಾಯಿಸತಕ್ಕದ್ದೋ ಆ ಕಾರ್ಯವಿಧಾನ;

(ಬಿ) 4ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನ ಮತ್ತು ಸದಸ್ಯರ ಸೇವಾ ಷರತ್ತುಗಳು;

(ಸಿ) 4ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಮಂಡಳಿಯ ಸಭೆಗಳಲ್ಲಿ ವ್ಯವಹಾರ ನಡೆಸುವ ಬಗ್ಗೆ ಪ್ರಕ್ರಿಯಾ ನಿಯಮಗಳು;

(ಡಿ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(ಇ) 14ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಾಯಿತ ಸಂಸ್ಥೆಯು ಪಾಲಕತ್ವಕ್ಕಾಗಿ ಸಲ್ಲಿಸಬಹುದಾದ ಅರ್ಜಿ ನಮೂನೆ;

(ಎಫ್) 17ನೇ ಪ್ರಕರಣದ ಮೇರೆಗೆ ಪಾಲಕನನ್ನು ತೆಗೆಯಲು ಅನುಸರಿಸಬಹುದಾದ ಕಾರ್ಯವಿಧಾನ;

(ಜಿ) 23ನೇ ಪ್ರಕರಣದ ಮೇರೆಗೆ ಟ್ರಸ್ಟಿನ ಆಯವ್ಯಯ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕ ನಮೂನೆ ಮತ್ತು ಕಾಲ;

(ಹೆಚ್) 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ನಿರ್ವಹಿಸತಕ್ಕ ನಮೂನೆ;

(ಐ) 25ನೇ ಪ್ರಕರಣದ ಮೇರೆಗೆ ವಾರ್ಷಿಕ ವರದಿಗಳನ್ನು ತಯಾರಿಸತಕ್ಕ ಮತ್ತು ಕಳುಹಿಸತಕ್ಕ ನಮೂನೆ ಮತ್ತು ಕಾಲ;

(ಜೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

**35. ವಿನಿಯಮ ರಚನಾಧಿಕಾರ.**- (1) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳಲ್ಲಿ ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ವ್ಯಕ್ತಿಯನ್ನು ಸಹ ಸದಸ್ಯನಾಗಿ ಸೇರಿಸಕೊಳ್ಳಬಹುದಾದ ರೀತಿ ಮತ್ತು ಉದ್ದೇಶ;

(ಬಿ) 4ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಮಂಡಳಿಯು ಸಭೆ ಸೇರತಕ್ಕ ಕಾಲ ಮತ್ತು ಸ್ಥಳ;

(ಸಿ) 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಟ್ರಸ್ಟಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ, ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕ ನಮೂನೆ ಮತ್ತು ರೀತಿ ಮತ್ತು ಆ ಉಪಪ್ರಕರಣದ ಮೇರೆಗೆ ಅಂಥ ಅರ್ಜಿಯಲ್ಲಿ ಅಡಕವಾಗತಕ್ಕ ವಿವರಗಳು;

(ಇ) 14ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗಿನ ಪಾಲಕತ್ವಕ್ಕಾಗಿ ಸಲ್ಲಿಸಲಾದ ಅರ್ಜಿಯನ್ನು ಸ್ಥಳೀಯ ಮಟ್ಟದ ಸಮಿತಿಯು ಸ್ವೀಕರಿಸುವ, ಪರಿಶೀಲಿಸುವ ಮತ್ತು ತೀರ್ಮಾನಿಸುವ ರೀತಿ;

(ಎಫ್) 14ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗಿನ ಅರ್ಜಿಗಳ ವಿವರಗಳು ಮತ್ತು ಸ್ಥಳೀಯ ಮಟ್ಟದ ಸಮಿತಿಯು ಅದರ ಮೇಲೆ ಮಾಡಿದ ಆದೇಶಗಳು;

(ಜಿ) 19ನೇ ಪ್ರಕರಣದ ಮೇರೆಗೆ ನೋಂದಾಯಿತ ಸಂಸ್ಥೆಯ ನಿಧಿ ನೀಡಿಕೆಯ ಪೂರ್ವದ ಸ್ಥಿತಿಗತಿಯನ್ನು ಮೌಲ್ಯಮಾಪನ ಮಾಡುವ ಮತ್ತು ಅಂಥ ನೋಂದಾಯಿತ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವುದಕ್ಕಾಗಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ಕಾರ್ಯವಿಧಾನ;

(ಹೆಚ್) 20ನೇ ಪ್ರಕರಣದ (2)ನೇ ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಕಳುಹಿಸತಕ್ಕ ಕಾಲ ಮತ್ತು ಅಂಥ ಸಭೆಗೆ ಅವಶ್ಯವಿರತಕ್ಕ ಕೋರಂ; ಮತ್ತು

(ಐ) ವಿನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಗತ್ಯವಿರುವ ಯಾವುದೇ ಇತರ ವಿಷಯ.

**36. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.**- ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ವಿನಿಯಮವನ್ನು, ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅವನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಅಥವಾ ವಿನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

* * *